# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.

ಸಿ.ಸಿ.ನಂ.**493/2025**

ಫಿರ್ಯಾದುದಾರರು ವಿರುದ್ಧ ಆರೋಪಿ

ಅಡಿವೆಪ್ಪ ತಂದೆ ತಮ್ಮಣ್ಣ ಮಾಂಗ ಶ್ರೀಶೈಲ್ ತಂದೆ ರಾಮಯ್ಯ ಮಠಪತಿ

| | |
|---|---|
| ಆರೋಪಿಯ ಹೆಸರು | ಶ್ರೀಶೈಲ್ ಮಠಪತಿ |
| ತಂದೆಯ ಹೆಸರು | ರಾಮಯ್ಯ |
| ವಯಸ್ಸು | 45 ವರ್ಷ |
| ಉದ್ಯೋಗ | ವ್ಯಾಪಾರ & ಒಕ್ಕಲುತನ |
| ವಾಸಸ್ಥಳ | ಚಿಕ್ಕಪಡಸಲಗಿ, ತಾಃ ಜಮಖಂಡಿ |

## ದಂಡ ಪ್ರಕ್ರಿಯಾ ಸಂಹಿತೆ ಕಲಂ.**313** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ 1: ನೀವು ಫಿರ್ಯಾದುದಾರರ ಪರವಾಗಿ ನೀಡಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ ?

ಉತ್ತರಃ ತಿಳಿದುಕೊಂಡಿದ್ದೇನೆ.

ಪ್ರಶ್ನೆ 2: ಪ್ರಾಸಾ-1) ಅಡಿವೆಪ್ಪ ತಂದೆ ತಮ್ಮಣ್ಣ ಮಾಂಗ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, 2024 ನೇ ವರ್ಷದ ಜನೇವರಿ ತಿಂಗಳ ಕೊನೆಯ ವಾರದಲ್ಲಿ ಆರೋಪಿಯಾದ ನೀವು ನಿಮ್ಮ ಕೌಟುಂಬಿಕ ಮತ್ತು ವ್ಯವಹಾರದ ಅಡಚಣೆ ಪ್ರಯುಕ್ತ ರೂ.3,00,000/- (ರೂಪಾಯಿ ಮೂರು ಲಕ್ಷ ಮಾತ್ರ) ಹಣವನ್ನು ಫಿರ್ಯಾದುದಾರರಿಂದ ಕೈಸಾಲವಾಗಿ ಪಡೆದಿರುತ್ತೀರಿ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರಶ್ನೆ 3: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಆರೋಪಿಯಾದ ನೀವು ಸದರಿ ಮೊತ್ತದ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಶಾಖೆ ಮೈಗೂರು ರಸ್ತೆ, ಜಮಖಂಡಿ ಬ್ಯಾಂಕ್ ಚೆಕ್ ನಂ.064900 ದಿನಾಂಕ 18.07.2024 ನ್ನು ರೂ.3,00,000/- (ರೂಪಾಯಿ ಮೂರು ಲಕ್ಷ ಮಾತ್ರ) ಮೊತ್ತಕ್ಕೆ ಕೊಟ್ಟಿರುತ್ತೀರಾ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರಶ್ನೆ 4: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ನೀವು ನೀಡಿರುವ ಚೆಕ್‌ನ್ನು ನಗದೀಕರಣಕ್ಕಾಗಿ ತನ್ನ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಶಾಖೆ ಹಿರೇಪಡಸಲಗಿ ಬ್ಯಾಂಕ್‌ಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್‌ನವರು ದಿನಾಂಕ

19.07.2024 ರಂದು "Funds insufficient" ಎಂಬ ಹಿಂಬರಹದೊಂದಿಗೆ ಹಣವನ್ನು ನೀಡದೇ ಸದರಿ ಚೆಕ್‌ನ್ನು ಮರಳಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರಶ್ನೆ 5: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ದಿನಾಂಕ 25.07.2024 ರಂದು ಚೆಕ್‌ನಲ್ಲಿ ಹೇಳಿರುವಂತಹ ಹಣವನ್ನು ಪಾವತಿ ಮಾಡಲು ತಮ್ಮ ವಕೀಲರ ಮುಖಾಂತರ ನಿಮಗೆ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನೀಡಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರಶ್ನೆ 6: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಸದರಿ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನಿಮಗೆ ದಿನಾಂಕ 26.07.2024 ರಂದು ಜಾರಿಯಾಗಿದ್ದು, ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನೀಡಿದ 15 ದಿನಗಳ ನಂತರವೂ ನೀವು ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ಮತ್ತು ಅವರು ತಮ್ಮ ಹೇಳಿಕೆಯ ಮೂಲಕ ನಿಶಾನೆ ಪಿ.1 ರಿಂದ ನಿಶಾನೆ ಪಿ.5 ರ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರಶ್ನೆ 7: ನಿಮ್ಮ ಪರವಾಗಿ ಸ್ವಇಚ್ಛೆಯಿಂದ ಬೇರೆ ಏನನ್ನಾದರೂ ಹೇಳುವುದು ಇದೆಯೇ ?

ಉತ್ತರಃ ಇಲ್ಲ

ಪ್ರಶ್ನೆ 8: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲೆ ಸಾಕ್ಷ್ಯವನ್ನು ಹಾಜರುಪಡಿಸುವಿರಾ ?

ಉತ್ತರಃ ಸಾಕ್ಷ್ಯ ಮಾಡಿಸುತ್ತೇನೆ.

(ಈ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಅರ್ಥೈಸಿದ ನಂತರ, ಆರೋಪಿಯು ನೀಡಿದ ಉತ್ತರಗಳನ್ನು ಇಂದು ದಿನಾಂಕ 17.03.2026 ರಂದು ಈ ಮೇಲಿನಂತೆ ನಮೂದಿಸಿಕೊಳ್ಳಲಾಯಿತು)

ಓ.ಹೇ.ಕೇ. ಸರಿ ಇದೆ.

RAJASHEKHAR

Digitally signed by RAJASHEKHAR
Date: 2026.03.17 18:35:26 +0530

ಸ್ಥಳಃ ಜಮಖಂಡಿ.
ದಿನಾಂಕಃ 17.03.2026

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.